ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು):

ಅ) ಬಾಗೇಪಲ್ಲಿ ಪಟ್ಟಣದಲ್ಲಿ ಯಾವುದೇ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ. ಆದರೆ, ಬಾಗೇಪಲ್ಲಿ ತಾಲ್ಲೂಕನ್ನು ಅತೀ ಹೆಚ್ಚು ಹಿಂದುಳಿದ ತಾಲ್ಲೂಕು ಎಂದು ಡಾ: ಡಿ.ಎಂ.ನಂಜುಂಡಪ್ಪರವರ ಅಧ್ಯಕ್ಷತೆಯಲ್ಲಿನ ಸಮಿತಿಯು ವರದಿ ಮಾಡಿದ್ದು, ಇತ್ತೀಚೆಗೆ 2005–06 ಆಯವ್ಯಯದಲ್ಲಿ ಘೋಷಿಸಲಾದ "ಕೈಗಾರಿಕಾ ವಿಕಾಸ" ಯೋಜನೆಯಡಿಯಲ್ಲಿ ಸಮಗ್ರ ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಗುರುತಿಸಲಾದ 39 ತಾಲ್ಲೂಕುಗಳಲ್ಲಿ ಸೇರಿರುತ್ತದೆ. ಸದರಿ ಯೋಜನೆಯಡಿ ತಾಲ್ಲೂಕಿನಲ್ಲಿ ಕೈಗಾರಿಕಾ ಗುಂಪು ಯೋಜನೆ, ಉದ್ಯಮಶೀಲತಾ ತರಬೇತಿ, ತಾಂತ್ರಿಕ ತರಬೇತಿ, ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಯೋಜನೆಯ ರೂಪರೇಶೆಗಳನ್ನು ಸದ್ಯದಲ್ಲೆ ಅಂತಿಮಗೊಳಿಸಿ ಕಾರ್ಯರೂಪಕ್ಕೆ ತರಲಾಗುವುದು.

1866(2624) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿನ ನೊಂದಾಯಿತ ವಕ್ಫ್ ಸಂಸ್ಥೆಗಳ ಸಂಖ್ಯೆ ಎಷ್ಟು;

ಆ) ಉಡುಪಿ ಜಿಲ್ಲೆಯ ರಾಜ್ಯ ಅಥವಾ ಕೇಂದ್ರ ಸರ್ಕಾರದ ವಕ್ಫ್ ಅಭಿವೃದ್ಧಿ ಕೌನ್ಸಿಲ್‌ನಿಂದ ಸಹಾಯ ನೀಡಲಾದ ವಕ್ಫ್ ಸಂಸ್ಥೆಗಳೆಷ್ಟು ಹಾಗೂ ನೀಡಲಾದ ಮೊತ್ತವೆಷ್ಟು;

ಇ) ಕಾರ್ಕಳ ಕ್ಷೇತ್ರದಲ್ಲಿರುವ ಮಸೀದಿ, ಹಾಗೂ ದರ್ಗಾಗಳ ಸಂಖ್ಯೆ ಎಷ್ಟು;

ಈ) ಇವುಗಳಿಗೆ ಸರ್ಕಾರ ಬಿಡುಗಡೆಗೊಳಿಸಿದ ಅನುದಾನ ಎಷ್ಟು ಸಂಸ್ಥೆಗಳವಾರು, ವರ್ಷವಾರು, 3 ವರ್ಷಗಳ ವಿವರ ಒದಗಿಸಿರಿ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 105 ಸಂಸ್ಥೆಗಳು.

ಆ) 1) ಕೇಂದ್ರ ವಕ್ಫ್ ಪರಿಷತ್ತಿನಿಂದ ಸಾಲ ಪಡೆದ ಸಂಸ್ಥೆಗಳ ಸಂಖ್ಯೆ–2 ಹಾಗೂ ಒಟ್ಟು ಹಣ ರೂ.25 ಲಕ್ಷಗಳು ಸಾಲ ಮಂಜೂರಾಗಿದೆ.

2) ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತಿನಿಂದ ಸಾಲ ಪಡೆದ ವಕ್ಫ್ ಸಂಸ್ಥೆಗಳ ಸಂಖ್ಯೆ–2 ಹಾಗೂ ಒಟ್ಟು ಹಣ 20 ಲಕ್ಷಗಳು ಸಾಲ ಮಂಜೂರಾಗಿದೆ.

ಇ) ಕಾರ್ಕಳ ಮತ ಕ್ಷೇತ್ರದಲ್ಲಿ 25 ಮಸೀದಿ ಹಾಗೂ 1 ದರ್ಗಾ ಇರುತ್ತದೆ.

ಈ) ಸರ್ಕಾರದಿಂದ ಬಿಡುಗಡೆಗೊಳಿಸಿದ ಅನುದಾನ ವರ್ಷವಾರು ವಿವರ ಈ ಕೆಳಕಂಡಂತಿದೆ:

2002–03	–	2,10,000
2003–04	–	25,000
2004–05	–	20,000